ನಿಲ್ಲಿಸಿದ. ಭಯದಿಂದ ಅವರ ಕಡೆಗೆ ತಿರುಗಿದ. ಅವರು ಜೇಬಿನಿಂದ ರೂಪಾಯಿ ನೋಟುಗಳನ್ನು ತೆಗೆದು ಎಣಿಸಿ ಅವನ ಬಳಿ ಕೊಟ್ಟರು. 'ತೆಕೊಂಡು ಹೋಗಿ ನಿನ್ನ ಅಮ್ಮನ ಹತ್ರ ಕೊಡು. ನಾನು ಅಬ್ದುಲ್ಲಾನ ನೋಡ್ಕೊಂಡು ಬರ್ತೀನಿ' ಎನ್ನುತ್ತಾ ಉಳಿದ ನೋಟುಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಹೋದರು.

'ನಿಮ್ಮ ಅಭಿಮಾನದ ನವೀನ ಚಿತ್ರಮಂದಿರದಲ್ಲಿ ಇದಯಕ್ಕಣಿ ಸಿನಿಮಾ ಇಪ್ಪತ್ತೈದನೆಯ ದಿನ ಗೆಲುವಿನಿಂದ ಓಡುತ್ತಿದೆ.' ಎಂದು ಧ್ವನಿವರ್ಧಕದಲ್ಲಿ ಒಬ್ಬರು ಹೇಳುತ್ತಿರಲು, ಒಂದು ವಾಹನ ಸಂಭ್ರಮದಿಂದ ಆ ರಸ್ತೆಯೊಳಗೆ ಬಂದಿತು. ಅವನು ಸೈಕಲ್ಲಿನೊಂದಿಗೆ ಪಕ್ಕಕ್ಕೆ ಸರಿದು, ಆ ವಾಹನಕ್ಕೆ ದಾರಿಬಿಟ್ಟನು. 'ಔತಣಕ್ಕೆ ಮೂರು ಹಣ್ಣು, ಗಣಪನಿಗೆ ಬೇಲದಹಣ್ಣು, ಕುಟುಂಬದೊಂದಿಗೆ ನೋಡಿ ಸಂತೋಷಿಸಲು ಇದಯಕ್ಕಣಿ. ಪ್ರೀತಿಯ ಪಾಂಡಿಚ್ಚೇರಿ ರಸಿಕ ಮಹಾಜನಗಳೇ ಇಂದೇ ಸಾವಿರಾರು ಸಂಖ್ಯೆಯಲ್ಲಿ ಬನ್ನಿ' ಎಂಬ ಪ್ರಚಾರದ ದನಿ ಮೊಳಗುತ್ತಲೇ ಇತ್ತು.

ಅವನ ಅವಸ್ಥೆಯನ್ನು ನೋಡಿದ ಅಮ್ಮ ಕೋಪದಿಂದ ಬೈಯ ತೊಡಗಿದಳು. 'ಆ ಆಸಾಮಿಗೆ ಬುದ್ಧಿ ಇಲ್ಲಾಂದ್ರೆ ನಿನಗೆಲ್ಲೋ ಹೋಯ್ತು ಬುದ್ಧಿ? ಸೈಕಲ್ಲೂ ಬೇಡ ಮಣ್ಣೂ ಬೇಡಾಂತ ಹೇಳೋದಕ್ಕೆ ಬಾಯಿಲ್ವೇನೋ? ಬಾಯಲ್ಲೇನು ಕಡುಬುಇಟ್ಕೊಂಡಿದ್ಯಾ?' ಎಂದು ಶುರುಮಾಡಿಕೊಂಡ ಬೈಗಳನ್ನು ಅವಳು ನಿಲ್ಲಿಸಲೇ ಇಲ್ಲ. ಎಲ್ಲ ಗಾಯಗಳನ್ನು ತೊಳೆದು ಒರಸಿ, ನರ್ಸಮ್ಮನ ಮನೆಯಿಂದ ಟಿಂಕ್ಚರ್ ತಂದು ಹಚ್ಚುವವರೆಗೆ ಬೈಯುತ್ತಲೇ ಇದ್ದಳು. ಅವನ ತಮ್ಮಂದಿರು ತಂಗಿಯರು ಸುತ್ತ ನಿಂತು ತಮಾಷೆ ನೋಡುತ್ತಿದ್ದರು.

'ಅವನಿಗಿರೋ ಅಭ್ಯಾಸಾನೆಲ್ಲಾ ಒಂದೊಂದಾಗಿ ನಿನಗೂ ಕಲಿಸಿಕೊಟ್ಟ ಮೇಲೇ ಆ ಬೇಮಾನಿ ನಿಲ್ಲಿಸ್ತಾನೆ ಅಂತ ಕಾಣ್ಸುತ್ತೆ. ಕಷ್ಟಗಳು ಒಂದೇ, ಎರಡೇ, ನನಗೆ ಜೀವನಾ ಪೂರ್ತಿ ಈ ತಲೆನೋವೇ. ಆ ತಾಯಿ ಯಾವತ್ತು ಇದರಿಂದ ಪಾರುಮಾಡ್ತಾಳೋ' ಎಂದು ಹೇಳುತ್ತಲೇ ಮೂಗನ್ನು ಸೀಟಿಕೊಂಡಳು. ಅವಳ ಕಣ್ಣುಗಳಿಂದ ಕಣ್ಣೀರು ಉಕ್ಕಿಹರಿಯಿತು.

ಎರಡುಗಂಟೆಯ ಸೈರನ್ ಕೂಗಿದಾಗ ಅಪ್ಪ ತೂರಾಡುತ್ತಾ ಮನೆಗೆ ಬಂದರು. ಹೊಸಿಲಿನ ಮೆಟ್ಟಲನ್ನು ಹತ್ತಲಾಗದೆ ಎರಡುಮೂರು ಸಲ ಎಡವಿ ಕೆಳಗೆ ಬಿದ್ದರು. ಅಲ್ಲಿಂದಲೇ ಅವರ ಬೈಗಳ ಶುರುವಾಯಿತು. ಕೈಯನ್ನು ಊರಿ ಮೆಟ್ಟಲು ಹತ್ತಿ ಒಳಗೆ ಬಂದಕೂಡಲೆ ಗೋಡೆಯ ಪಕ್ಕದಲ್ಲಿ ಮಲಗಿದ್ದ ಅವನ ಬೆನ್ನಿಗೆ ಒಂದು ಒದೆ ಬಿತ್ತು. 'ಅವನನ್ನ ಯಾಕೆ ಹೊಡಿತೀಯಾ?' ಎಂದು ಬುಸುಗುಟ್ಟುತ್ತ ಅಮ್ಮ ಎದ್ದುಬಂದಾಗ, ಅವಳಿಗೂ ಏಟುಬಿತ್ತು. ಅಯ್ಯೋ ಎಂದು ಅರಚುತ್ತ ಅಮ್ಮ ಕೆಳಗೆ ಬಿದ್ದಳು. ಹಿಡಿತಕ್ಕೆ ಸಿಗದ ಕೋಳಿಯಂತೆ ಕೋಣೆಯೊಳಗೆಯೇ ಅಲ್ಲಿ ಇಲ್ಲಿ ಓಡಿದಳು. ಹಿಂದುಗಡೆ ಒದ್ದು ಅವಳನ್ನು ಬೀಳಿಸಿ ಅಪ್ಪ ಹೊಡೆಯಲು ಶುರುಮಾಡಿದರು. ಮತ್ತೆ ಮತ್ತೆ ಹೊಡೆತ ಬೈಗಳ. ಯಾವುದೂ ನಿಲ್ಲಲಿಲ್ಲ. ತಡೆಯಲು ಹೋದ ಮಕ್ಕಳಿಗೂ ಒದೆತಗಳು ಬಿದ್ದವು. ಪೆಟ್ಟು ಬಿದ್ದದ್ದರಿಂದ ತಮ್ಮನ ತುಟಿ ಬಾತುಕೊಂಡಿತು. ಎಲ್ಲರೂ ನಡುಗುತ್ತಾ ಜೋರಾಗಿ ಅರಚಿದರು. 'ಮನೆ ಏನೋ ಇದು? ಥೂ, ಒಳ್ಳೆ ನರಕ' ಎಂದು ಕ್ಯಾಕರಿಸಿ ಉಗಿದು ಅಪ್ಪ ಹೊರಟು ಹೋದರು.

ಮಧ್ಯಾಹ್ನ ಉಳಿದಿದ್ದ ಅನ್ನಕ್ಕೆ ಸಾರನ್ನು ಸುರಿದು ಕಲಸಿ ತಟ್ಟೆಯಲ್ಲಿಟ್ಟು ರಾತ್ರಿ ಎಲ್ಲರಿಗೂ ಅಮ್ಮ ಕೊಟ್ಟಳು. ತಮ್ಮಂದಿರು, ತಂಗಿಯರು ಊಟ ಮಾಡಿದಕೂಡಲೆ ನಿದ್ದೆಹೋದರು. ಮುತ್ತುಸಾಮಿ ಮಾತ್ರ ಪ್ರಶ್ನೋತ್ತರ ಬರೆದು ಅಭ್ಯಾಸ ಮಾಡುವುದರಲ್ಲಿ ತೊಡಗಿದ್ದ.